


ವರ್ಷದೊಳಗಿನ ರಾಷ್ಟ್ರೀಯ ತಂಡದ ಪರವಾಗಿ ಆಡಿದಾಗ, 2012ರ ವಿಶ್ವಕಪ್ ಕ್ವಾರ್ಟರ್ ಫೈನಲ್‌ವರೆಗೆ ಹೋದ ಖುಷಿ. ಆ ಸರಣಿಯಲ್ಲಿ ಅತಿ ಹೆಚ್ಚು ರನ್ ಕಲೆಹಾಕಿದ್ದ ಬ್ಯಾಟ್ಸ್‌ಮನ್ ಅವರು. 201314ರಲ್ಲಿ ರಣಜಿ ಟೂರ್ನಿಗೆ ಆಯ್ಕೆಯಾದ ಮಯಂಕ್, ಮರುವರ್ಷವೇ ಭರವಸೆಯ ಆರಂಭಿಕ ಆಟಗಾರ ಎನಿಸಿಕೊಳ್ಳುವುದರಲ್ಲಿದ್ದರು. ಫಿಟ್‌ನೆಸ್ ಆಗ ಕೈಕೊಟ್ಟಿತು. ರಣಜಿ ಋತುವಿನ ಕೊನೆಯ ಅರ್ಧ ಭಾಗ ಬೆಂಚು ಕಾಯಬೇಕಾಗಿ ಬಂದದ್ದು ದುರಂತ. ಆಗಲೇ ರಾಹುಲ್ ದ್ರಾವಿಡ್ ಪಾಠ ಹೇಳಿದ್ದು – 'ಈ ಹುಡುಗನಿಗೆ ಇದು ಎಚ್ಚರಿಕೆಯ ಗಂಟೆ'. ರಾಹುಲ್ ಮಾತನ್ನು ಗಂಭೀರವಾಗಿ ಪರಿಗಣಿಸಿದ ಮಯಂಕ್, ಫಿಟ್‌ನೆಸ್ ಕಡೆಗೆ ನಿಗಾ ವಹಿಸಿದರು.

ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್)ನಲ್ಲಿ ಸಾವಿರ ರನ್ ಗಳಿಸಿದ ಮೊದಲ ಬ್ಯಾಟ್ಸ್‌ಮನ್ ಎಂಬ ಅಗ್ಗಳಿಕೆಯ ಗರಿ ಸಿಕ್ಕಿಸಿಕೊಂಡ ಈ ಹುಡುಗ ಐಪಿಎಲ್ ನಲ್ಲಿ ಒಮ್ಮೆ ಯುವರಾಜ್ ಸಿಂಗ್ ಒಟ್ಟಿಗೆ ಶತಕದ ಜೊತೆಯಾಟದಲ್ಲಿ ಭಾಗಿಯಾದರು. 'ಈ ಹುಡುಗ ಬೇಗ ಭಾರತ ತಂಡವನ್ನು ಪ್ರತಿನಿಧಿಸಲಿ' ಎಂದು ಯುವಿ ಆಗ ಹಾರೈಸಿದ್ದು ಇನ್ನೂ ನೆನಪಿನಲ್ಲಿದೆ. 'ಬೇಗ' ಎನ್ನುವುದು ಸಾಧ್ಯವಾಗಲಿಲ್ಲವಷ್ಟೆ.

ಕರ್ನಾಟಕದ ಪರವಾಗಿ ಆಡಿ ಪ್ರಥಮ ದರ್ಜೆ ಕ್ರಿಕೆಟ್ ನಲ್ಲಿ 73 ಪಂದ್ಯಗಳಿಂದ 3372 ರನ್ ಜಮೆ ಮಾಡಿದರು. ಇಂಡಿಯಾ 'ಎ' ಪ್ರತಿನಿಧಿಸಿದ 70 ಪಂದ್ಯಗಳಿಂದ 3472 ರನ್ ಕೂಡಿಸಿಟ್ಟದ್ದೂ ಸಾಧನೆಯೇ. 201718ರ ದೇಸಿ ಕ್ರಿಕೆಟ್ ಋತುವಿನಲ್ಲಿ 2141 ರನ್ ಸೇರಿಸಿ, ವರ್ಷದಲ್ಲಿ ಅತಿ ಹೆಚ್ಚು ರನ್ ಗಳಿಸಿದ ದೇಸಿ ಆಟಗಾರ ಎನಿಸಿಕೊಂಡರು. ಆದರೂ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಲು ಚಾತಕಪಕ್ಷಿ ಆಗಬೇಕಾದದ್ದು ಚೋದ್ಯ.

ದೇಸಿ ಕ್ರಿಕೆಟ್‌ನಲ್ಲಿ ಅಷ್ಟೆಲ್ಲ ರನ್ ಕಲೆಹಾಕಿದ ಮೇಲೆ ಅವರನ್ನು ವಿಧಿಯಿಲ್ಲದೆ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಗೆ ಆಯ್ಕೆ ಮಾಡಿದರು. ಆದರೆ, ಆಡುವ ಹನ್ನೊಂದು ಮಂದಿಯಲ್ಲಿ ಅವರು ಒಬ್ಬರಾಗಲೇ ಇಲ್ಲ. ಬೆಂಚ್ ಕಾದದ್ದೇ ಬಂತು.

ಹಾಗೆ ನೋಡಿದರೆ ಭಾರತ ಕ್ರಿಕೆಟ್ ತಂಡದ ಆಯ್ಕೆಯ ವಿಷಯ ಬಂದಾಗಲೆಲ್ಲ ಮುಂಬೈ ಲಾಬಿ ಜೋರಾಗಿ ನಡೆಯುವುದು ಲಾಗಾಯ್ತಿನಿಂದ ಇದ್ದಿದ್ದೇ. ಜಗಮೋಹನ್ ದಾಲ್ಮಿಯಾ ಪ್ರಭಾವಿ ಆಗಿದ್ದಾಗ ಸೌರವ್ ಗಂಗೂಲಿಗೆ ಮಣೆ ಸಿಕ್ಕು, ದ್ರಾವಿಡ್ ಕೂಡ ಹಿಂದಕ್ಕೆ ಉಳಿದಿದ್ದವರೇ. ಆದರೆ ರಾಹುಲ್ ದ್ರಾವಿಡ್ ಯಾವತ್ತೂ ಚೀಟಿ ಹಿಡಿದುಕೊಂಡು ತಮ್ಮ ಸರಾಸರಿಯನ್ನು ಲೆಕ್ಕ ಹಾಕಲು ಹೋಗಲಿಲ್ಲ. 2011ರಲ್ಲಿ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ 461 ರನ್ ಗಳಿಸಿ ಸರಣಿ ಗೆಲುವು ದಕ್ಕಿಸಿಕೊಟ್ಟ ಮೇಲೂ ಅವರೆಂದೂ ಮಾನಸಿಕವಾಗಿ ಬಳಲಲಿಲ್ಲ. ಮುಂದೆ ಆಸ್ಟ್ರೇಲಿಯಾ ವಿರುದ್ಧ ಫಾರ್ಮ್ ಕಳೆದುಕೊಂಡಿದ್ದೇ ಕ್ರಿಕೆಟ್ ವೃತ್ತಿಬದುಕಿಗೆ ವಿದಾಯ ಹೇಳಿ ಸುಮ್ಮನಾಗಿಬಿಟ್ಟರು.

ಶೈಲಿ ಹಾಗೂ ಸ್ಥಿಮಿತತೆಯ ದೃಷ್ಟಿಯಿಂದ ಮಯಂಕ್ ಬ್ಯಾಟಿಂಗ್ ಅನ್ನು ದ್ರಾವಿಡ್ ಅವರ ರೀತಿಗೆ ಹೋಲಿಸಲಾಗುತ್ತಿದೆ. ಆದರೆ, ಈ ಕಾಲಘಟ್ಟವೇ ಬೇರೆ. ವಿಜಯ್ ಹಜಾರೆ ಟ್ರೋಫಿ ಫೈನಲ್ ನಲ್ಲಿ 78 ಎಸೆತಗಳಿಗೆ 90 ರನ್ ಗಳಿಸಿದ್ದ ಮಯಂಕ್ ಈ ಕಾಲದ ಪ್ರತಿಭೆ. ಅದು ದೇಸಿ ಕ್ರಿಕೆಟ್‌ನಲ್ಲೇನೋ ಸಾಬೀತಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಮನೋಬಲ ಪರೀಕ್ಷೆಗೊಳಗಾಗುವ ಕಾಲವೂ ಸನ್ನಿಹಿತವಾಗಿದೆ. ಕರ್ನಾಟಕದ ಕರುಣ್ ನಾಯರ್, ಕೆ.ಎಲ್. ರಾಹುಲ್ ಸಿಕ್ಕ ಅವಕಾಶಗಳನ್ನು ಹಣ್ಣು ಮಾಡಿಕೊಳ್ಳಲಾಗದೆ ತಡಕಾಡುತ್ತಿರುವಾಗ ಮಯಂಕ್‌ಗೆ ಅವಕಾಶದ ಕದ ತೆರೆದಿರುವುದು ನಿಜ. ಹಾಗೆಂದು ಅವರ ನಡಿಗೆ ಹುಲ್ಲುಹಾಸಿನ ಮೇಲೆ ಸಾಗಲು ಸಾಧ್ಯವಿಲ್ಲ. ರಜನೀಶ್ ಗುರುಬಾನಿ ತರಹದ ಬೌಲಿಂಗ್ ಪ್ರತಿಭೆ ದೇಸಿ ಕ್ರಿಕೆಟ್‌ನಲ್ಲಿ ಮಿಂಚಿಯೂ ಅವಕಾಶಕ್ಕಾಗಿ ಕಣ್ಣುಬಿಟ್ಟುಕೊಂಡು ನಿಂತಿರುವ ಕಷ್ಟ ನೋಡಿರುವ ಮಯಂಕ್ ಬ್ಯಾಟಿಂಗ್ ಡ್ರೈವ್‌ಗಳಿಗಿಂತ ಮನಸ್ಸಿನ ಆಟ ಮುಖ್ಯ ಎನ್ನುವುದನ್ನು ಚೆನ್ನಾಗಿಯೇ ಅರಿತಿದ್ದಾರೆ.

ಅಕ್ಟೋಬರ್‌ನಲ್ಲಿ ಅವರು ಮಂಡಳಿ ಅಧ್ಯಕ್ಷರ ಇಲೆವೆನ್ ತಂಡದ ಪರವಾಗಿ ವೆಸ್ಟ್ ಇಂಡೀಸ್ ವಿರುದ್ಧ ವಡೋದರಾದಲ್ಲಿ 90 ರನ್ ಗಳಿಸಿದಾಗಲೇ ತಮ್ಮನ್ನು ನಿರ್ಲಕ್ಷ್ಯ ಮಾಡುವುದು ಸಲ್ಲ ಎಂಬ ಸಂದೇಶ ನೀಡಿದ್ದರು. ದಕ್ಷಿಣ ಆಫ್ರಿಕಾ 'ಎ' ತಂಡದ ವಿರುದ್ಧ 200 ರನ್ ದಾಖಲಿಸಿದ ಮೇಲಂತೂ ಆತ್ಮವಿಶ್ವಾಸ ಇಮ್ಮಡಿಯಾಗಿತ್ತು. 201718ರ ರಣಜಿಯಲ್ಲಿ 13 ಇನಿಂಗ್ಸ್‌ಗಳಲ್ಲಿ ಅವರ ಸರಾಸರಿ 105.45. ಆ ಪಂದ್ಯಗಳಿಂದ 1000ಕ್ಕೂ ಹೆಚ್ಚು ರನ್ ಗಳಿಸಿದ ಏಕೈಕ ಬ್ಯಾಟ್ಸ್‌ಮನ್ ಅವರೆನ್ನುವುದೂ ಗರಿಮೆ.

ತಮ್ಮ ಖಾಸಗಿ ಕೋಚ್ ಆರ್ ಎಕ್ಸ್ ಮುರಳಿ ದಿನವೂ ಸಾವಿರಾರು ಎಸೆತಗಳನ್ನು ಹಾಕುತ್ತಾರೆ. ಮೂರೂವರೆ ತಾಸು ಅಭ್ಯಾಸ, ಒಂದು ತಾಸು ವಿಚಾರ ಮಂಥನ – ಇದು ಮಯಂಕ್ ರೂಢಿಸಿಕೊಂಡಿರುವ ದಿನಚರಿ.

ರಾಹುಲ್ ದ್ರಾವಿಡ್ ಹೇಳಿದ ಕಿವಿಮಾತನ್ನು ಒಳಗಿಳಿಸಿಕೊಂಡಿರುವ ಅವರ ಮುಂದಿನ ದಿನಗಳು ಕುತೂಹಲವನ್ನಂತೂ ಮೂಡಿಸಲಿವೆ.